ಅವಳಿಗೆ ನಂಬಿಕೆಯೂ ಇರಲಿಲ್ಲ. ಅವಳಿಗೆ ನನ್ನ ಭಾವನೆಗಳಿಗೆ ಆಘಾತ ಮಾಡುವ ಭಯ ಸಹ ಇರಲಿಲ್ಲ. ಹೀಗಾಗಿ ನೀನಾ ಡೆನಿಶ್ ವಿದೇಶಾಂಗ ಸಚಿವಾಲಯಕ್ಕೆ ಸೂಚಿಸುವುದಕ್ಕೆ ಮೊದಲು ನನಗೆ ಹೇಳಿದಳು.

'ಪಾಲ್, ನಾವು ಬೇರೆಯಾಗುತ್ತಿದ್ದೇವೆ ಎಂದು ನಾನು ವಿದೇಶಾಂಗ ಸಚಿವಾಲಯಕ್ಕೆ ಸೂಚಿಸುತ್ತಿದ್ದೇನೆ...'

ಡೆನ್ಮಾರ್ಕ್‌ನ ಕಾನೂನಿನ ಪ್ರಕಾರ, ಒಂದು ವೇಳೆ ಡೆನಿಶ್ ನಾಗರಿಕನೊಬ್ಬ, ಬೇರೆ ದೇಶದ ನಾಗರಿಕಳೊಂದಿಗೆ ವಿವಾಹವನ್ನು ಮಾಡಿಕೊಂಡರೆ ಅಥವಾ ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿದ್ದರೆ, ಹಾಗೂ ಅದು ಮುರಿದುಬಿದ್ದರೆ, ಕೂಡಲೇ ವಿದೇಶಾಂಗ ಸಚಿವಾಲಯಕ್ಕೆ ಸೂಚಿಸಬೇಕು.

ನಾನು ಅವಳನ್ನು ಜಿಗುಪ್ಸೆಯಿಂದ ನೋಡುತ್ತಾ ರೇಗಿದೆ, 'ನಿನಗೆ ಆ ತುಂಬಿದ ಸಮಾರಂಭದಲ್ಲಿ ನನ್ನನ್ನು ಅವಮಾನಗೊಳಿಸಿ ಶಾಂತಿ ಸಿಗಲಿಲ್ಲ, ಅದಕ್ಕೆ ಈಗಲೂ ನನ್ನನ್ನು ಅವಮಾನಿಸುತ್ತಿದ್ದೀಯ?'

'ಪಾಲ್, ನಾನು ಕಾನೂನನ್ನು ಮಾತ್ರ ಪಾಲಿಸುತ್ತಿದ್ದೇನೆ.'

ನನ್ನ ಬಾಯಿಯಿಂದ ಈ ಮಾತುಗಳಷ್ಟೇ ಬಂದವು, 'ಮನುಷ್ಯನಿಗಿಂತ ಕಾನೂನು ನಿನ್ನ ದೃಷ್ಟಿಯಲ್ಲಿ ದೊಡ್ಡದೇ? ಸರಿ! ನಾನು ಖಂಡಿತ ಇದನ್ನು ಹೊಗಳುತ್ತೇನೆ, ನೀನಾ ಶ್ರೀನಿವಾಸನ್!' ನಾನು ನನ್ನ ಸಿಟ್ಟನ್ನು ನನ್ನೊಳಗೆ ಹತ್ತಿಕ್ಕಿಕೊಂಡು ಅಲ್ಲಿಂದ ಹೊರಟು, ಮೇಲಿನ ಬೆಡ್ ರೂಮಿಗೆ ಬಂದೆ. ನನ್ನ ಕಿಲ್ಟ್ ಕಳಚಿ ನೆಲಕ್ಕೆ ಒಗೆದೆ. ಬೇವರ್ಸಿ ಕಿಲ್ಟ್! ನಂತರ ಸಾಮಾನ್ಯ ಉಡುಪು ಧರಿಸಿ ಕೆಳಗಿನ ಹಾಲ್‌ಗೆ ಹೋದೆ. ಅಲ್ಲಿದ್ದ ಮೇಜಿನ ಮೇಲೆ ವೈನ್, ಬೀರ್ ಮತ್ತು ವ್ಹಿಸ್ಕಿ ಬಾಟಲಿಗಳು ಇನ್ನೂ ಬಿದ್ದಿದ್ದವು. ವೈನಿನ ಬಾಟಲಿ ತೆರೆದು ಒಂದು ಗ್ಲಾಸಿಗೆ ಸುರಿದು ನನ್ನ ವರ್ಷಾನುಗಟ್ಟಲೆಯ ರೆಕಾರ್ಡ್ ಮುರಿದೆ. ನಾನು ಅದೆಷ್ಟೋ ವರ್ಷಗಳಿಂದ ಕುಡಿದಿರಲಿಲ್ಲ, ಹೀಗಾಗಿ ಎರಡು ಪೆಗ್ ಕುಡಿಯುತ್ತಲೇ ಅಮಲೇರಿತು, 'ಬೇವರ್ಸಿ ಪಾಲ್... ಐವತ್ತರ ದಾಂಡಿಗ! ನೀನು ಇದಕ್ಕೇ ಯೋಗ್ಯ... ಹೆಂಗಸೊಬ್ಬಳು ನಿನ್ನನ್ನು ಅವಮಾನಿಸಿದಳು. ನೀನು ಇದಕ್ಕೇ ಯೋಗ್ಯ' ನಾನು ವಟಗುಟ್ಟುತ್ತಲೇ ಇದ್ದೆ. ನನ್ನನ್ನೇ ಹಳಿದುಕೊಳ್ಳುತ್ತಿದ್ದೆ. ನಂತರ ಆವೇಶಕ್ಕೊಳಗಾಗಿ ವ್ಹಿಸ್ಕಿ ಕುಡಿದೆ. ಅದರ ಒಂದು ಪೆಗ್ ಕುಡಿದ ಕೂಡಲೇ ತಡಬಡಿಸುತ್ತಾ ಅತ್ತ ಇತ್ತ ಓಲಾಡಿದೆ.

ನಂತರ ಅಲ್ಲಿಯೇ ಇದ್ದ ಸೋಫಾದಲ್ಲಿ ಕೂತೆ. ಮಳೆ ಆರಂಭವಾಗಿತ್ತು. ನನ್ನ ಜೀವನದಂತೆ ಕಿಟಕಿಯ ಗಾಜುಗಳಿಗೆ ಡಿಕ್ಕಿ ಹೊಡೆಯುತ್ತಿದ್ದ ಮಳೆಯ ಹನಿಗಳು ಒಂದು ಚಾಲೆಂಜ್ ಆಗಿ ತೋರುತ್ತಿದ್ದವು. ನಾನು ದುಃಖದಿಂದ ಯೋಚಿಸುತ್ತಾ ಕೂತೆ. ನೀನಾ ನನ್ನೊಂದಿಗೆ ಹೀಗೇಕೆ ಮಾಡಿದಳು? ನನ್ನ ಬಗ್ಗೆ ಅವಳಿಗಿಷ್ಟೊಂದು ಜಿಗುಪ್ಸೆಯಾಗಿದೆಯೇ! ಅವಳು ತನ್ನ ಹೆಸರಿನ ಮುಂದೆ ಶ್ರೀನಿವಾಸನ್ ಹೆಸರಿನ ಬದಲು ಸ್ಕಾಟ್ ಎಂದು ಹಾಕಿಕೊಂಡಿದ್ದಳು, ಅಷ್ಟು ಅವಳು ನನ್ನನ್ನು ಪ್ರೀತಿಸುತ್ತಿದ್ದಳು. ನೀನಾ ಸ್ಕಾಟ್! ಆದರೆ ಆಮೇಲೆ ಏನಾಯಿತು? ಸ್ಕಾಟ್ ಎಲ್ಲಿ ಕುಸಿದು ಬಿದ್ದ?

ನಾನು ಅದೆಷ್ಟು ಹೊತ್ತು ಸೋಫಾದಲ್ಲಿ ಕೂತಿದ್ದೆನೋ, ತಿಳಿಯದು. ನಾನು ಕೆಳಗಿದ್ದ ಸೋಫಾದಿಂದೆದ್ದು ಮೇಲಿನ ಬೆಡ್ ರೂಮಿಗೆ ಹೋಗಲಿಲ್ಲ ಎಂಬುದಷ್ಟೇ ನನಗೆ ಗೊತ್ತು; ನಾನು ಲೂಸಿ ಮತ್ತು ಗ್ರೇಸಿಗೆ ಕೊಟ್ಟ ರೂಮಿಗೆ ಬಂದಿದ್ದೆ. ಇಬ್ಬರು ಹುಡುಗಿಯರು ಮೌನವಾಗಿ ಮಲಗಿ ತಮ್ಮ ತಮ್ಮ ಸೆಲ್ ಫೋನ್‌ನಲ್ಲಿ ಮುಳುಗಿದ್ದರು. ಅವರು ತಮ್ಮ ಗಮನವನ್ನು ಬಲಾತ್ಕಾರವಾಗಿ ಬೇರೆಡೆಗೆ ಹೊರಳಿಸಲು ಬಯಸುತ್ತಿರುವಂತೆ ತೋರುತ್ತಿತ್ತು. ಈಗ ಇಬ್ಬರೂ ಸಂಪೂರ್ಣವಾಗಿ ಹದಿನೇಳರ ತರುಣಿಯರಾಗಿದ್ದರು ಎಂಬುದನ್ನು ಗಮನಿಸಿದೆ. ಲೂಸಿ ಪೂರ್ಣವಾಗಿ ಯೂರೋಪಿನ್ನಳಂತೆ ತೋರುತ್ತಿದ್ದರೆ, ಗ್ರೇಸಿಯಲ್ಲಿ ಇಂಡಿಯನ್ ಜೀನ್ಸ್ ಮೇಲುಗೈ ಸಾಧಿಸಿತ್ತು. ಇಬ್ಬರು ಅದೆಷ್ಟು ಉತ್ಸಾಹದಿಂದ ತಮ್ಮ ಶಾಲೆಯಿಂದ ರಜಾ ಪಡೆದು ನನ್ನ ಐವತ್ತನೆಯ ಹುಟ್ಟುಹಬ್ಬದಲ್ಲಿ ಭಾಗವಹಿಸಲು ಎಡಿನಬರೊದಿಂದ ಬಂದಿದ್ದರು. ಇಬ್ಬರು ಅದೆಷ್ಟು ಖುಷಿಯಿಂದ ಡ್ಯಾನ್ಸ್ ಮಾಡಿದ್ದರು. ಆದರೆ ಎಲ್ಲವೂ ಅದೆಷ್ಟು ಬೇಗ ಕುರೂಪವನ್ನು ತಾಳಿತು.

ನನ್ನ ಕಾಲು ಸಪ್ಪಳದಿಂದ ಅವರ ಗಮನ ಚದುರಿತು. ಇಬ್ಬರೂ ಹೆದರಿದ್ದರು.

ಲೂಸಿ ನನ್ನನ್ನು ನೋಡುತ್ತಾ ಕಳವಳದಿಂದ ಕೇಳಿದಳು, 'ಡ್ಯಾಡಿ, ಈಗ ನೀವೇನು ಮಾಡುತ್ತೀರಿ?'

'ಏನು ಮಾಡುತ್ತೇನೆ? ಏನು ಮಾಡಲಿ? ಗೊತ್ತಿಲ್ಲ... ಹೀ ಹೀ ಹೀ...' ನಾನು ನಗಲಾರಂಭಿಸಿದೆ.

ಇಬ್ಬರೂ ಪರಸ್ಪರ ನೋಡಿಕೊಂಡರು. ಅವರ ಮುಖದಲ್ಲಿ ಇಬ್ಬಂದಿಯ ಭಾವನೆ ಮೂಡಿತು. ಅವರು ನನ್ನ ಕೈಗಳನ್ನು ಹಿಡಿದುಕೊಂಡು ಹೇಳಿದರು, 'ಪಪ್ಪಾ, ನೀವು ಆರೋಗ್ಯವಾಗಿದ್ದೀರ ತಾನೇ?'

'ಏಕೆ? ನನಗೇನಾಯಿತು?'

'ನೀವು ಹೀಗೆ ಭ್ರಾಂತರಾಗಿ ಏಕೆ ಮಾತಾಡುತ್ತಿದ್ದೀರಿ? ನಮಗೆ ಹೆದರಿಕೆಯಾಗ್ತಿದೆ...'

ನಾನು ಇಬ್ಬರನ್ನೂ ಬರಸೆಳೆದುಕೊಂಡು ಹೇಳಿದೆ, 'ಮಕ್ಕಳೇ, ಹೆದರಬೇಡಿ. ನನಗೇನೂ ಆಗಿಲ್ಲ. ನಾನು ಸಂಪೂರ್ಣ ಆರೋಗ್ಯವಾಗಿದ್ದೇನೆ.'

ಹುಡುಗಿಯರಿಗೆ ಸ್ವಲ್ಪ ಧೈರ್ಯ ಬಂತು. ಸ್ವಲ್ಪ ಹೊತ್ತಿನ ಮೌನದ ನಂತರ ಗ್ರೇಸಿ ಉದ್ವಿಗ್ನತೆಯಿಂದ ಕೇಳಿದಳು, 'ಪಪ್ಪಾ, ಇನ್ನು ನೀವೆಲ್ಲಿರುತ್ತೀರ? ಈ ಮನೆ?'

'ಈಗೇನು ಮಾಡುವುದು? ಎಲ್ಲಿಗೆ ಹೋಗುವುದು? ಎಲ್ಲಿರುವುದು? ಈ ಮನೆ ಹೈಕಮಾಂಡ್ ನೀನಾಳಿಗೆ ಸೇರಿದೆ, ಅವಳು ಪಾಲ್‌ರನ್ನು ಬಹಿಷ್ಕರಿಸಿದ್ದಾಳೆ.'

'ಪಪ್ಪಾ...' ಇಬ್ಬರು ಪುತ್ರಿಯರು ನನ್ನನ್ನು ತಡೆದರು, 'ಹೀಗೆಲ್ಲಾ ಮಾತಾಡಬೇಡಿ. ನಿಮಗಾಗಿ ಒಂದು ನೆಲೆಯನ್ನು ಹುಡುಕಿ.'

ಇದು ವಾಸ್ತವವಾಗಿಯೂ ಒಂದು ಗಂಭೀರ ಸಮಸ್ಯೆಯಾಗಿತ್ತು. ನನ್ನ ಪುತ್ರಿಯರೊಂದಿಗೆ ಸಮಾಲೋಚನೆ ಮಾಡಿದೆ. ಕಡೆಗೆ ಮರುದಿನ ಅವರು ಎಡಿನಬರೊಗೆ ಮರಳಿ ಹೋದ ನಂತರ ನಾನೂ ಇಲ್ಲಿಂದ ನನ್ನ ಗಂಟು ಮೂಟೆ ಕಟ್ಟಿಕೊಂಡು ಎಲ್ಲಾದರೂ ಹೋಗುವುದಾಗಿ ನಿರ್ಧರಿಸಿದೆ. ಸದ್ಯಕ್ಕೆ ಒಂದು ಗೆಸ್ಟ್ ಹೌಸ್ ಅಥವಾ ಒಂದು ಟೂರಿಸ್ಟ್ ಹೋಮಿಗೆ ಶರಣಾಗುತ್ತೇನೆ, ನಂತರ ನನಗಾಗಿ ಒಂದು ಬಾಡಿಗೆ ಮನೆಯನ್ನು ಹುಡುಕುತ್ತೇನೆ ಎಂದೂ ನಿರ್ಧರಿಸಿದೆ.

ಇದ್ದಕ್ಕಿದ್ದಂತೆ ನನ್ನ ಲ್ಯಾಪ್‌ಟಾಪ್ ತೆರೆದು ಡೆನ್ಮಾರ್ಕ್‌ನಲ್ಲಿರುವ ಟೂರಿಸ್ಟ್ ಹೋಮ್ ಅನ್ನು ನೋಡಲಾರಂಭಿಸಿದೆ. ಲೂಸಿ ಮತ್ತು ಗ್ರೇಸಿ ನನಗೆ ಸಹಾಯ ಮಾಡಲಾರಂಭಿಸಿದರು.

ನಾನು ಎದುರಿಗೆ ನಿಂತಿದ್ದ ಬೋರ್ಡನ್ನು ಗಮನವಿಟ್ಟು ಓದಿದೆ. ಅಲ್ಲಿ 'ಹೆಸಲೆವ್' ಎಂದು ಬರೆಯಲಾಗಿತ್ತು. ಅದೊಂದು ಚಿಕ್ಕ ಪ್ರದೇಶವಾಗಿತ್ತು. ಕತ್ತಲಾದ್ದರಿಂದ ಬೋರ್ಡ್ ಓದಲು ಕಷ್ಟವಾಯಿತು. ರಸ್ತೆ ಶೂನ್ಯವಾಗುತ್ತಿದೆ. ದೃಶ್ಯ ಬದಲಾಗುತ್ತಿದೆ; ನಗರದಿಂದ ಹಳ್ಳಿಗೆ ಬದಲಾಗುತ್ತಿದೆ. ಯುವಕರು ಸಹ ಈಗ ಕಾಣಬರುತ್ತಿಲ್ಲ. ನಾಲ್ಕೂ ಕಡೆ ನಿಶಬ್ದತೆ ಮಾತ್ರ ಕವಿದಿದೆ. ಭಯದೊಂದಿಗೆ ರೋಮಾಂಚನದ ಅನುಭವ ಸಹ ಆಗುತ್ತಿದೆ. ರಾತ್ರಿಯ ದಟ್ಟ ಅಂಧಕಾರ; ನಾನು ಒಂಟಿ ಪ್ರಯಾಣಿಕ... ದೇವರು ನನ್ನನ್ನು ರಕ್ಷಿಸಲಿ. ಜೀಸಸ್ ಕ್ರೈಸ್...!

## ಮತ್ತೆ ವಿಚ್ಛೇದನ

ನನ್ನ ಮತ್ತು ನೀನಾಳ ನಡುವೆ ಸಂಭವಿಸುತ್ತಿದ್ದ ಮನಸ್ತಾಪದ ಬಗ್ಗೆ ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಇದಕ್ಕೆ ನೀನಾ ಮಾತ್ರ ದೋಷಿಯೆಂದು ನಾನು ಹೇಳಲಾರೆ. ಕೆಲವು ಪರಿಸ್ಥಿತಿಗಳು ಇದಕ್ಕೆ ಕಾರಣವಾದರೆ, ಇನ್ನು ಕೆಲವು ನ್ಯೂನತೆಗಳು ನನ್ನಲ್ಲಿಯೂ ಇದ್ದವು. ಅವಳು ರೇಗುತ್ತಿದ್ದ ವಿಷಯಗಳನ್ನೇ ನಾನು ಪುನರಾವರ್ತಿಸುತ್ತಿದ್ದೆ. ನಾನು ಅನೇಕ ಬಾರಿ ಅವಳನ್ನು ಅವಮಾನಿಸಿದೆ, ಅವಳು ನಾಚುವಂತೆ ಮಾಡಿದೆ. ಅವಳ ಚಿಕ್ಕ ಪುಟ್ಟ ಒತ್ತಾಯಗಳನ್ನು ಸಹ ತಿರಸ್ಕರಿಸಿದೆ.

ಅವಳ ಪುತ್ರಿಯರೊಂದಿಗೂ ನನ್ನ ಜಗಳ ಆರಂಭವಾಗಿತ್ತು. ತಮ್ಮ ತಾಯಿಯ ಪುನರ್ವಿವಾಹದ ಬಗ್ಗೆ ಅಸಮಾಧಾನವನ್ನು ಹೊಂದಿದ್ದ ಅವಳ ಪುತ್ರಿಯರೊಂದಿಗೆ ಸಂಬಂಧವನ್ನು ಕಾಯ್ದಿಟ್ಟುಕೊಳ್ಳುವುದು ನನಗೊಂದು ಚಾಲೆಂಜ್ ಆಗಿತ್ತು. ವಿವಾಹ ಇಬ್ಬರು ವ್ಯಕ್ತಿಗಳ ನಡುವೆ ಅಲ್ಲ, ಎರಡು ಪರಿವಾರಗಳ ನಡುವೆ ನಡೆಯುತ್ತದೆ ಎಂದು ಹೇಳುವುದು ಉಚಿತವೇ ಆಗಿದೆ. ನೀನಾಳ ಪುತ್ರಿಯರಿಗೆ ತಂದೆಯಾಗುವುದು ಹಾಗೂ ಅವಳ ತಂದೆ ತಾಯಿಗೆ ಮಗನಾಗುವುದು – ಈ ಎರಡೂ ನನಗೆ ಕಷ್ಟವಾಗಿತ್ತು. ಆದರೂ ನಾನು ಬೇರೆಯವರ ಮಕ್ಕಳ ಪಾಲನೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು, ಅವರನ್ನು ಮಕ್ಕಳಂತೆ ಪ್ರೀತಿಸುವುದು, ಅವರ ಬೆಡಗು ಬಿನ್ನಾಣವನ್ನು ಸಹಿಸುವುದು ನನ್ನ ಆಯ್ಕೆಯಾಗಿತ್ತು. ಆದರೆ ನೀನಾಳ ಪುತ್ರಿಯರು ತಮ್ಮ ಜೀವನದಲ್ಲಿ ನನ್ನನ್ನು ಇಷ್ಟಪಡುತ್ತಲೇ ಇರಲಿಲ್ಲ.

(ಸಶೇಷ)